# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

## KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@gmail.com

6ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು – 560 009.

ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2018-19/ Cys-3 ದಿನಾಂಕ 11 JUN 2018

## ಸುತ್ತೋಲೆ

ವಿಷಯ: ದಿನಾಂಕ: 01.04.2017ರಿಂದ 31.03.2018ರ ಅವಧಿಯ ಪಿಂಚಣಿ/ಕುಟುಂಬ ಪಿಂಚಣಿ ಬಾಕಿ ಮೊತ್ತವನ್ನು ನಾಲ್ಕು ಕಂತುಗಳಲ್ಲಿ ಪಾವತಿಸಲು ಪ್ರತಿ ಮಾಹೆ ನಿಧಿ ಕೋರುವ ಕುರಿತು.

ಉಲ್ಲೇಖ:
1. ಈ ಕಛೇರಿ ಸುತ್ತೋಲೆ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/2012-13/ಸಿವೈಎಸ್-34 ದಿನಾಂಕ 12.12.2012.
2. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/69518/2017-18 ದಿನಾಂಕ: 09.03.2018.
3. ಈ ಕಛೇರಿ ಸುತ್ತೋಲೆ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2018-19/ಸಿವೈಎಸ್-01 ದಿನಾಂಕ: 11.04.2018
4. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/69518/2017-18 ದಿನಾಂಕ: 05.06.2018.

***********

ಉಲ್ಲೇಖ-3ರ ಸುತ್ತೋಲೆಯಲ್ಲಿ, 31.03.2017ರಲ್ಲಿದ್ದಂತೆ ಪಿಂಚಣಿ/ಕುಟುಂಬ ಪಿಂಚಣಿದಾರರ ಪಿಂಚಣಿ/ಕುಟುಂಬ ಪಿಂಚಣಿಯನ್ನು ಹಾಗೂ ದಿನಾಂಕ 01.04.2017ರ ನಂತರ ನಿವೃತ್ತಿಯಾಗುತ್ತಿರುವ/ನಿವೃತ್ತಿ ನಂತರ ನಿಧನರಾಗುವ/ಸೇವೆಯಲ್ಲಿರುವಾಗಲೇ ನಿಧನರಾಗುವ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಅಂಶಗಳನ್ನು ತಿಳಿಸಲಾಗಿರುತ್ತದೆ.

ಉಲ್ಲೇಖ-4ರ ಆದೇಶದಲ್ಲಿ ದಿನಾಂಕ 01.04.2017ರಿಂದ ಅನ್ವಯವಾಗುವಂತೆ ನಿವೃತ್ತರಾಗಿರುವ ನಿಗಮದ ನೌಕರರು ಹಾಗೂ ಅಧಿಕಾರಿಗಳ ಪಿಂಚಣಿ/ಕುಟುಂಬ ಪಿಂಚಣಿಯನ್ನು ಪರಿಷ್ಕರಿಸಿದ ಪರಿಣಾಮ ದಿನಾಂಕ 01.04.2017 ರಿಂದ 31.03.2018ರ ಅವಧಿಯ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಮೊತ್ತವನ್ನು ನಿವೃತ್ತರಾಗಿರುವ ನೌಕರರು/ಅಧಿಕಾರಿಗಳಿಗೆ ಹಾಗೂ ಈ ಅವಧಿಯಲ್ಲಿ ಸೇವೆಯಲ್ಲಿದ್ದು ಮರಣಹೊಂದಿರುವ ನೌಕರರು/ಅಧಿಕಾರಿಗಳ ಅವಲಂಬಿತರಿಗೆ ಜೂನ್-2018ರಿಂದ ಪ್ರಾರಂಭಿಸಿ ಈ ಕೆಳಕಂಡಂತೆ ನಾಲ್ಕು ಕಂತುಗಳಲ್ಲಿ ನಗದಾಗಿ ಪಾವತಿಸಲು ನಿಗಮವು ಅನುಮೋದಿಸಿದೆ.

| ಅವಧಿ | ಪಾವತಿಸಬೇಕಾದ ತಿಂಗಳು |
|---|---|
| ದಿನಾಂಕ; **01.04.2017** ರಿಂದ **30.06.2017** ರ ಅವಧಿಯ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಮೊತ್ತ. | ಮೊದಲನೇ ಕಂತು ಜೂನ್-2018 |
| ದಿನಾಂಕ; **01.07.2017** ರಿಂದ **30.09.2017** ರ ಅವಧಿಯ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಮೊತ್ತ. | ಎರಡನೇ ಕಂತು ಜುಲೈ-2018 |
| ದಿನಾಂಕ; **01.10.2017** ರಿಂದ **31.12.2017** ರ ಅವಧಿಯ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಮೊತ್ತ. | ಮೂರನೇ ಕಂತು ಆಗಸ್ಟ್-2018 |
| ದಿನಾಂಕ; **01.01.2018** ರಿಂದ **31.03.2018** ರ ಅವಧಿಯ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯ ಬಾಕಿ ಮೊತ್ತ. | ನಾಲ್ಕನೇ ಕಂತು ಸೆಪ್ಟಂಬರ್-2018 |

ಮೇಲಿನ ಹಿನ್ನೆಲೆಯಲ್ಲಿ, ಪಿಂಚಣಿ ಬಟವಾಡೆ ಲೆಕ್ಕಘಟಕಗಳು ಪಿಂಚಣಿ ವ್ಯತ್ಯಾಸ ನಿಧಿ ಕೋರಿಕೆಯನ್ನು ಉಲ್ಲೇಖ-1ರ ಸುತ್ತೋಲೆಯಲ್ಲಿ ತಿಳಿಸಿರುವಂತೆ, ಸರ್ಕಾರದ ಭಾಗ ಹಾಗೂ ಕಂಪನಿ ಭರಿಸಬೇಕಾದ ಭಾಗವನ್ನು ವಿಂಗಡಿಸಿ, ಸಂಬಂಧಪಟ್ಟ ದಾಖಲೆಗಳಲ್ಲಿ ನಮೂದಿಸಿ ಈ ಸುತ್ತೋಲೆಗೆ ಲಗತ್ತಿಸಿರುವ **ನಮೂನೆ-3ರಲ್ಲಿ** ನಿಗದಿತ ದೃಢೀಕರಣದೊಂದಿಗೆ ಆಂತರಿಕ ಪರಿಶೋಧನೆಗೆ ಒಳಪಡಿಸಿ ಈ ಕಛೇರಿಗೆ ಸಲ್ಲಿಸುವುದು.

ದಿನಾಂಕ 01.04.2017 ರಿಂದ 31.03.2018ರ ಅವಧಿಯಲ್ಲಿ ನಿವೃತ್ತಿಯಾಗಿರುವ/ನಿವೃತ್ತಿ ನಂತರ ನಿಧನರಾಗಿರುವ/ಸೇವೆಯಲ್ಲಿರುವಾಗಲೇ ನಿಧನರಾಗಿರುವ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯ ಪರಿಷ್ಕರಣೆಯು ಸಕ್ಷಮ ಪಿಂಚಣಿ ಅಧೀಕರಿಸುವ ಪ್ರಾಧಿಕಾರವು (ಕವಿಪ್ರನಿನಿ/ವಿಸಕಂಗಳ ಆರ್ಥಿಕ ಸಲಹೆಗಾರರು) ಪಿಂಚಣಿ ಅಧೀಕರಿಸಿದ ತರುವಾಯವಷ್ಟೇ ಪಿಂಚಣಿ ಬಾಕಿ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಳ್ಳುವುದು.

ನಿಧನಗೊಂಡ ನಿವೃತ್ತಿದಾರರು/ಕುಟುಂಬ ಪಿಂಚಣಿದಾರರ ಅರ್ಹ ಅವಲಂಬಿತರು/ವಾರಸುದಾರರಿಗೆ ಅವರ ನೈಜತೆಯನ್ನು ನಿಯಮಾನುಸಾರ ದೃಢೀಕರಿಸಿಕೊಂಡು ಪಿಂಚಣಿ/ಕುಟುಂಬ ಪಿಂಚಣಿ ಬಾಕಿ ಮೊತ್ತವನ್ನು ಪಾವತಿಸಬಹುದಾಗಿದೆ.

ಮುಂದುವರೆದು, ಜೂನ್-2018 ರಿಂದ ಪ್ರಾರಂಭಿಸಿ ಪಿಂಚಣಿ ಬಾಕಿ ಮೊತ್ತವನ್ನು ನಮೂನೆ-1ರಲ್ಲಿ ನಮೂದಿಸಿ, Pension Payment Managmenet Systems ತಂತ್ರಾಂಶದಿಂದ ಜನಿತಗೊಂಡ ಮಾಸಿಕ ನಮೂನೆ-2, 2A & 3 ಜೊತೆಗೆ ಹಿಂದಿನ ತಿಂಗಳ ಬ್ಯಾಂಕ್ ಸಮನ್ವಯ ಪಟ್ಟಿಯನ್ನು ಲಗತ್ತಿಸಿ ಪ್ರತಿ ಮಾಹೆಯ 20ನೇ ದಿನಾಂಕದೊಳಗೆ ಹಾರ್ಡ್ ಮತ್ತು ಸಾಫ್ಟ್ ಪ್ರತಿಯಲ್ಲಿ ಟ್ರಸ್ಟ್ ಕಛೇರಿಗೆ ಕಡ್ಡಾಯವಾಗಿ ಸಲ್ಲಿಕೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು. ನಿಗದಿತ ದಿನಾಂಕದೊಳಗೆ ಪಿಂಚಣಿ ನಿಧಿ ಕೋರಿಕೆಯು ಟ್ರಸ್ಟ್‌ಗೆ ಸಲ್ಲಿಕೆಯಾಗದಿದ್ದ ಪಕ್ಷದಲ್ಲಿ ಮುಂದಿನ ಪರಿಣಾಮಗಳಿಗೆ ಪಿಂಚಣಿ ಬಟವಾಡೆ ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆಂದು ತಿಳಿಯಪಡಿಸಲಾಗಿದೆ.

ನಿರ್ದೇಶಕರು(ಹಣಕಾಸು),
ಕವಿಪ್ರನಿನಿ ಮತ್ತು ಅಧ್ಯಕ್ಷರು (ಪಿಂ & ಉ ಟ್ರಸ್ಟ್)ರವರಿಂದ
ಅನುಮೋದಿಸಲ್ಪಟ್ಟಿದೆ.

ಆರ್ಥಿಕ ಸಲಹೆಗಾರರು ಮತ್ತು ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ/ವಿಸಕಂಗಳ ಪಿಂಚಣಿ & ಉಪದಾನ ಟ್ರಸ್ಟ್.

ಪ್ರತಿ ಮಾಹಿತಿಗಾಗಿ:

1. ಆರ್ಥಿಕ ಸಲಹೆಗಾರರು(ಲೆ & ಸಂ), ಕವಿಪ್ರನಿನಿ, ಕಾವೇರಿ ಭವನ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ), ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು.
3. ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ.

ಪ್ರತಿ ಸೂಕ್ತ ಕ್ರಮಕ್ಕಾಗಿ:

4. ಅಧೀಕ್ಷಕ ಇಂಜಿನಿಯರ್(ವಿ), ಮಾಹಿತಿ ತಂತ್ರಜ್ಞಾನ, ಗಣಕಯಂತ್ರ ಶಾಖೆ, ಕಾವೇರಿ ಭವನ, ಬೆಂಗಳೂರು-09 ಕೆಇಪಿಜಿಟಿ ವೆಬ್ ತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ.
5. ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಿಭಾಗ/ಆಂ.ಪ, ಬೆವಿಕಂ/ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ.
6. ಲೆಕ್ಕಾಧಿಕಾರಿಗಳು, ಕವಿಪ್ರನಿನಿ, ಎಂ.ಆರ್.ಎಸ್.ಶಿವಮೊಗ್ಗ/ವ್ಯವಸ್ಥಾಪಕರು(ನ&ಲೆ), ಕಾವೇರಿ ಭವನ.

ನಮೂನೆ-3

ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/69518/2017-18 ದಿನಾಂಕ 05.06.2018ರ ಅನುಸಾರ

**1ನೇ/2ನೇ/3ನೇ/4ನೇ ಕಂತು**

_________ ವಿಭಾಗದ _________ ವರ್ಷದ _________ ಮಾಹೆಯ ಪಿಂಚಣಿ/ಕುಟುಂಬ ಪಿಂಚಣಿ ಬಾಕಿ ಮೊತ್ತದ ನಿಧಿ ಕೋರಿಕೆ ಪತ್ರ

| ಅವಧಿ | ವಿವರಗಳು | ಪಿಂಚಣಿದಾರರ ವಿವರಗಳು | | ಕುಟುಂಬ ಪಿಂಚಣಿದಾರರ ವಿವರಗಳು | | ಒಟ್ಟು ಸಂಖ್ಯೆ/ಮೊತ್ತ |
|---|---|---|---|---|---|---|
| | | ಸರ್ಕಾರದ ಭಾಗ | ಕಂಪನಿ ಭಾಗ | ಸರ್ಕಾರದ ಭಾಗ | ಕಂಪನಿ ಭಾಗ | |
| **31.05.2002ಕ್ಕಿಂತ ಮುಂಚಿನ** | ಪಿಂಚಣಿದಾರರ ಸಂಖ್ಯೆ | | xxxxx | | xxxxx | |
| | ಪಿಂಚಣಿ ಮೊತ್ತ | | | | | |
| | ತುಟ್ಟಿಭತ್ಯೆ | | | | | |
| | ಮೊತ್ತ | | | | | |
| **01.06.2002ರ ನಂತರದ** | ಪಿಂಚಣಿದಾರರ ಸಂಖ್ಯೆ | xxxxx | | xxxxx | | |
| | ಪಿಂಚಣಿ ಮೊತ್ತ | | | | | |
| | ತುಟ್ಟಿಭತ್ಯೆ | | | | | |
| | ಮೊತ್ತ | | | | | |
| ಒಟ್ಟು ಪಿಂಚಣಿದಾರರ ಸಂಖ್ಯೆ | | | | | | |
| ಒಟ್ಟು ಪಿಂಚಣಿ ಮೊತ್ತ | | | | | | |
| ಸರ್ಕಾರ ಭರಿಸಬೇಕಾದ ಒಟ್ಟು ಮೊತ್ತ | | | | | | |
| ಕಂಪನಿಗಳು ಭರಿಸಬೇಕಾದ ಒಟ್ಟು ಮೊತ್ತ | | | | | | |

## ದೃಢೀಕರಣಗಳು

1. ಈಗ ಕ್ಲೇಮು ಮಾಡಿರುವ ಮೊತ್ತವನ್ನು ಈ ಹಿಂದೆ ಯಾವುದೇ ಬಿಲ್ಲಿನಲ್ಲಿ ಕ್ಲೇಮು ಮಾಡಿರುವುದಿಲ್ಲ.
2. ಎರಡನೇ ಬಾರಿ ಪಾವತಿಯಾಗದಂತೆ ತಡೆಯಲು ಸಂಬಂಧಪಟ್ಟ ಪಿಂಚಣಿ ದಾಖಲೆಗಳಲ್ಲಿ ಈಗ ಕ್ಲೇಮು ಮಾಡಿರುವ ಮೊತ್ತವನ್ನು ನಮೂದಿಸಲಾಗಿದೆ.
3. ಈ ಬಿಲ್ ಮೂಲಕ ಪಾವತಿಗಾಗಿ ಕೋರಿರುವ ಮೊತ್ತವು ಚಾಲ್ತಿ ಪಿಂಚಣಿ/ಕುಟುಂಬ ಪಿಂಚಣಿ ದರಗಳ ಅನ್ವಯ ಸರಿಯಾಗಿರುತ್ತದೆಂದು ದೃಢೀಕರಿಸಲಾಗಿದೆ.

ಸಹಾಯಕ ಲೆಕ್ಕಾಧಿಕಾರಿ
_________ ವಿಭಾಗ

ಲೆಕ್ಕಾಧಿಕಾರಿ
_________ ವಿಭಾಗ

ಲೆಕ್ಕಾಧಿಕಾರಿ(ಆಂ.ಪ)
_________ ವಿಭಾಗ